# ಕೋತಿ ಹಾಗೆ ಕುಣಿದಾಡಬೇಡ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 211.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ನಾದನಾಮಕ್ರಿಯೆ ತಾಳ: ಅಟ

ಕೋತಿ ಹಾಗೆ ಕುಣಿದಾಡಬೇಡ
ರೀತಿಮಾರ್ಗವ ಹಿಡಿಯೆಲೊ ಮೂಢ || ಪ ||

ಆತುರ ಹೆಚ್ಚಿ ಕೂಗಾಡಬೇಡ
ಪಾತಕ್ಕೆ ಈ ಜನ್ಮ ಬಿಡದಿರೊ ಮೂಢ || ಅಪ ||

ಹಳ್ಳೂರು ಕೇರ್ಯಾಗೆ ಇರುವುದು ಹಂದಿ
ನಾನಾ ಜನ್ಮವ ತಿರುಗುತ ಬಂದಿ
ಇಷ್ಟು ಸಂಸಾರವ ಮರೆಮಾಡಿಕೊಂಡಿ
ಮುಪ್ಪಿನ ಕಾಲಕ್ಕೆ ಅವಿಚಾರಗೊಂಡಿ || ೧ ||

ಹೆಂಡಿರು ಮಕ್ಕಳ ಪ್ರಪಂಚಕ್ಕಾಗಿ
ದುಡಿದುಹಾಕಿದ್ಯೋ ಮುದಿಕೋಣನಾಗಿ
ಮಡಿದುಹೋಗುವಾಗ ದಾರಿಲ್ಲೊ ಗೂಗೆ
ನಿನ್ನೊಳು ನೀನೆ ತಿಳಿದುಕೋ ಕಾಗೆ || ೨ ||

ರಾಯರು ಇರುವರು ಮದಗಜದಂತೆ
ಬಾಗಿ ನಡೀತೀರೋ ಬಿಡಿಸೂಳೆಯಂತೆ

ಇಷ್ಟು ಸಂಸಾರ ಸ್ಥಿರವಲ್ಲದಂತೆ
ಪುರಂದರವಿಠಲರಾಯ ಪದಮಾಡಿದಂತೆ || ೩ ||

**Classification:** Keerthane
**Ankita:** purandara vittala
**Location:** NA
**Category:** Jeevanoddhara, Mukti Marga
**Sub-Category:** koti, daari, janma, handi, samsara, patni, hendati, loka, koNa, goobe, hanuma, gaja,
**Pravachana:** NA
**Explanation:** NA